**ಚಿತ್ರಪಟ ಕಥನ**



ಅಫ್ಘನ್ ಚೆಲುವ



# ಇದು ಅಫ್ಘಾನಿಸ್ತಾನ!

ಎಲ್ಲೋ ಮಗು ಅಳುತಾ ಇದೆ... ಅಮ್ಮಂದಿರೂ ಅಳುತ್ತಿದ್ದಾರೆ. ನಿಟ್ಟುಸಿರುಗಳ ಕೂಡಿಕೊಂಡು ಬೀಸುವ ಗಾಳಿ ದಣಿದಿದೆ. ಎದುರಾಗುವ ಮುಖಗಳಲ್ಲಿ ಕಳವಳ, ಕಣ್ಣುಗಳಲ್ಲಿ ಆತಂಕ. ಇದು ಈ ಹೊತ್ತಿನ ಅಫ್ಘಾನಿಸ್ತಾನ.

ನಿದ್ದೆಯಿಂದ ಎಚ್ಚೆತ್ತಾಗ ಆವರೆಗೆ ನಾವು ಜೀವಿಸಿದ್ದ ಲೋಕವೇ ಬದಲಾದಂತೆ ಅಫ್ಘಾನಿಸ್ತಾನ ಕೂಡ ಬದಲಾಗಿದೆ. ಕೈಯಲ್ಲಿ ಬಂದೂಕು ಹಿಡಿದ ತಾಲಿಬಾನಿಗಳಿಂದ ಅಫ್ಘಾನಿಸ್ತಾನದ ಚಹರೆ ಒಮ್ಮೆಂದೊಮ್ಮೆಗೆ ಬದಲಾಗಿದೆ.

ಅಫ್ಘಾನಿಸ್ತಾನ ಹೀಗಿರಲಿಲ್ಲ. ಅದು ಹಲವು ಸಂಸ್ಕೃತಿ, ಧರ್ಮಗಳ ಮಣ್ಣಾಗಿತ್ತು. ಬೆಟ್ಟಗುಡ್ಡಗಳ ಪ್ರಾಕೃತಿಕ ಸಂಪತ್ತಿನ ನಾಡಾಗಿತ್ತು. ಪಾಕಿಸ್ತಾನ, ಇರಾನ್, ಉಜ್ಬೇಕಿಸ್ತಾನ, ಚೀನಾ ಸೇರಿದಂತೆ ಹಲವು ದೇಶಗಳ ನೆರೆಹೊರೆ ಅಫ್ಘಾನಿಸ್ತಾನಕ್ಕಿತ್ತು. ಈ ಚಾರಿತ್ರಿಕ ದೇಶ ಹಲವು ಯುದ್ಧ–ಸಂಘರ್ಷಗಳಿಗೂ ತನ್ನನ್ನೊಡ್ಡಿಕೊಂಡಿತು. ಅಲೆಕ್ಸಾಂಡರ್‌ನಿಂದ ಹಿಡಿದು, ಮೌರ್ಯರು, ಅರಬ್ಬರು, ಮಂಗೋಲಿಯನ್ನರು, ಬ್ರಿಟಿಷರು ಸೇರಿದಂತೆ ಹಲವರು ಅಫ್ಘಾನಿಸ್ತಾನದ ಮಣ್ಣಿನಲ್ಲಿ ನೆತ್ತರ ಚಿತ್ತಾರ ಬಿಡಿಸಿದ್ದಾರೆ. ರಷ್ಯಾ, ಅಮೆರಿಕ ಹಾಗೂ ‘ನ್ಯಾಟೊ’ ಲಾಂಛನದ ದೇಶಗಳಿಗೆ ಕೂಡ ಅಫ್ಘಾನಿಸ್ತಾನ ಆಟದ ಅಂಗಳವಾಗಿತ್ತು. ಈಗ ತಾಲಿಬಾನಿಯರ ಪಾಳಿ. ‘ಸಾಮ್ರಾಜ್ಯಗಳ ಮಸಣ’ ಎನ್ನುವ ವಿಶೇಷಣ ಅಫ್ಘಾನಿಸ್ತಾನಕ್ಕೆ ಸುಮ್ಮನೆ ಬಂದಿದ್ದಲ್ಲ.

ಹದಿನೆಂಟು ಹತ್ತೊಂಬತ್ತನೇ ಶತಮಾನದಲ್ಲಿ ‘ಆಧುನಿಕ ಅಫ್ಘಾನಿಸ್ತಾನ’ದಲ್ಲಿ ಬದಲಾವಣೆಯ ಗಾಳಿ ಬೀಸತೊಡಗಿತು. 1919ರ ಮೂರನೇ ಆಂಗ್ಲೋ–ಅಫ್ಘನ್ ಯುದ್ಧದೊಂದಿಗೆ ದೇಶ ಸ್ವಾತಂತ್ರ್ಯ ಘೋಷಿಸಿಕೊಂಡಿತು. ದೊರೆ ಅಮಾನುಲ್ಲಾರ ನೇತೃತ್ವದಲ್ಲಿ ಅಫ್ಘಾನಿಸ್ತಾನದಲ್ಲಿ ಅಭಿವೃದ್ಧಿಯ ಚಿಗುರು ಕಾಣಿಸಿಕೊಂಡಿತು. ಆದರೆ, ತಾಲಿಬಾನಿಗಳ ಆಗಮನದೊಂದಿಗೆ ಆ ಚಿಗುರು ಬಿರುಗಾಳಿಗೆ ಸಿಲುಕಿದೆ. ಕಳೆದ ಎರಡು ದಶಕಗಳಿಂದ ಬೀಸತೊಡಗಿದ್ದ ತಂಗಾಳಿಯನ್ನು ತಾಲಿಬಾನಿಗಳ ಆಡಳಿತ ಮತ್ತೆ ಮಸುಕಾಗಿಸಿದೆ. ಧರ್ಮದ ಹೆಸರಿನಲ್ಲಿ ಮನುಷ್ಯ ಎಸಗಬಹುದಾದ ಕ್ರೌರ್ಯದ ಅತಿರೇಕಕ್ಕೆ ಉದಾಹರಣೆಯಂತೆ ತಾಲಿಬಾನ್ ಆಡಳಿತ ಕಾಣಿಸುತ್ತಿದೆ.

ಅಫ್ಘಾನಿಸ್ತಾನ ಎಂದರೀಗ ಬರಿ ಕಹಿ ಸುದ್ದಿಗಳು; ಅಸಹಾಯಕ ಮುಖಗಳು, ಆಕ್ರಂದನದ ದನಿಗಳು. ಇದೇ ನಾಡಿನಲ್ಲಿ ಬುದ್ಧನ ಸ್ಮೃತಿಗಳಿವೆ. ಹಲವು ಸಂಸ್ಕೃತಿಗಳ ಸವಿನೆನಪುಗಳಿವೆ.

ಇಲ್ಲಿನ ಚಿತ್ರಪಟ ಅಫ್ಘಾನಿಸ್ತಾನದ ನಿಜ ಸತ್ವವನ್ನು ಕಟ್ಟಿಕೊಡುವ ಪ್ರಯತ್ನ.

ಎಲ್ಲೋ ಮಗು ಅಳುತಾ ಇದೆ... ಆ ಮಗುವಿಗೆ ಅಮ್ಮನ ಮಡಿಲು ದೊರೆಯಲಿ. ಆ ಅಮ್ಮನಿಗೆ ನೆಮ್ಮದಿಯ ಬದುಕು ಸಿಗಲಿ. ಇದಾಗಲಿ ನಮ್ಮೆಲ್ಲರ ಪ್ರಾರ್ಥನೆ.

**■ ವಿ.ಆರ್.**

ಪ್ರತಿಕ್ರಿಯಿಸಿ: feedback@sudha.co.in



ಸ್ಮೃತಿಯಲ್ಲಷ್ಟೇ ಉಳಿದಿರುವ ಬುದ್ಧನ ಪದಸ್ಥಳ